ಕನ್ನಡಪ್ರಭ

## ಸುರಾನಾ, ಜೈನ್ ತಂಡ ಸೆಮೀಸ್‌ಗೆ

ಬೆಂಗಳೂರು: ಹೆರಾನ್ಸ್ ಕ್ರಿಕೆಟ್ ಕ್ಲಬ್ ವತಿಯಿಂದ ಆಯೋಜಿಸಲಾಗಿರುವ ಅಂತರ್ ಪಿಯು ಕಾಲೇಜುಗಳ ಕ್ರಿಕೆಟ್ ಪಂದ್ಯಾವಳಿಯಲ್ಲಿ ಸುರಾನಾ, ಜೈನ್ (ವಿ.ವಿ.ಪುರಂ), ಜೈನ್ (ಜೆ.ಸಿ ರಸ್ತೆ), ಪ್ರೆಸಿಡೆನ್ಸಿ ಕಾಲೇಜು ತಂಡಗಳು ಸೆಮಿಫೈನಲ್ಸ್ ಹಂತಕ್ಕೆ ಪ್ರವೇಶಿಸಿವೆ. ಶನಿವಾರ ನಡೆದ ಪಂದ್ಯದಲ್ಲಿ ಜೈನ್ (ವಿ.ವಿ.ಪುರಂ) ತಂಡವು ಜೈನ್–3 ತಂಡವನ್ನು 27ರನ್‌ಗಳಿಂದ ಮಣಿಸಿತು. ಜೆ.ಪಿ ನಗರದ ಕ್ರೀಡಾಂಗಣದಲ್ಲಿ ನಡೆದ ಮೊದಲ ಪಂದ್ಯದಲ್ಲಿ, ವಿಜಯ ಕಾಲೇಜು ತಂಡವು ಅಂಬೇಡ್ಕರ್ ಕಾಲೇಜು ತಂಡದ ವಿರುದ್ಧ 20 ರನ್‌ಗಳಿಂದ ಜಯ ಸಾಧಿಸಿದೆ. ಇನ್ನು ಎರಡನೇ ಪಂದ್ಯದಲ್ಲಿ ಜೈನ್ (ಜೆ.ಸಿ ರಸ್ತೆ) ತಂಡವು ಕೇಂಬ್ರಿಡ್ಜ್ ಕಾಲೇಜು ತಂಡದ ವಿರುದ್ಧ 7 ವಿಕೆಟ್‌ಗಳ ಜಯ ದಾಖಲಿಸಿತು.